# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್.ಚೌಕ, ಬೆಂಗಳೂರು-560002.

ಸಂಖ್ಯೆ: ಮು.ಆ.ಅ(ಸಾ.ಆ.)ಪಿ.ಆರ್/ಕೋ-10/2021-22 ದಿನಾಂಕ : ೨೧-೦೫-೨೦೨೧

## ಕಛೇರಿ ಆದೇಶ

ವಿಷಯ : ಕೋವಿಡ್-19 ಸೋಂಕಿತ ಮೃತ ದೇಹಗಳ ಅಂತ್ಯಕ್ರಿಯೆಗೆ ವಿದ್ಯುತ್ ಚಿತಾಗಾರಗಳನ್ನು ಕಾಯ್ದಿರಿಸುವ ಬಗ್ಗೆ.

ಉಲ್ಲೇಖ : ವಿದ್ಯುತ್ ಚಿತಾಗಾರಗಳ ಚಟುವಟಿಕೆಗಳ ಕುರಿತು ನಡೆದ ಸಭೆಯ ಸಭಾನಡವಳಿಯ ಪತ್ರ ಸಂಖ್ಯೆ : ಮು.ಆ.ಅ(ಸಾ.ಆ)/ಪಿಆರ್/ಕೋವಿಡ್-01/2021-22 ದಿನಾಂಕ:15-04-2021.

********

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕೋವಿಡ್-19 ನಿಯಂತ್ರಣ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಪಾಲಿಕೆಯ 7 ವಿದ್ಯುತ್ ಚಿತಾಗಾರಗಳನ್ನು ಉಲ್ಲೇಖ ಪತ್ರದನ್ವಯ ಕೋವಿಡ್-19 ಸೋಂಕಿನಿಂದ ಮೃತಪಟ್ಟವರ ಸಂಸ್ಕಾರಕ್ಕೆ ಮಾತ್ರ ಕಾಯ್ದಿರಿಸಲಾಗಿರುತ್ತದೆ.

ಮೃತದೇಹಗಳ ಸಂಸ್ಕಾರ ಕ್ರಿಯೆಗಳನ್ನು ವ್ಯವಸ್ಥಿತವಾಗಿ ಮತ್ತು ಕಾಲ ವಿಳಂಬವಾಗದಂತೆ ನಿರ್ವಹಿಸಲು ಪಾಲಿಕೆಯಲ್ಲಿರುವ 12 ವಿದ್ಯುತ್ ಚಿತಾಗಾರಗಳಲ್ಲಿ ಕೋವಿಡ್-19 ಸೋಂಕಿನಿಂದ ಮೃತ ಪಟ್ಟ ಎಲ್ಲಾ ದೇಹಗಳ ಅಂತ್ಯ ಸಂಸ್ಕಾರ ಮಾಡಲು ಸೂಚಿಸಿದೆ ಹಾಗೂ ಇದರ ಜೊತೆಗೆ ಇತರೆ ಕಾರಣಗಳಿಂದ ಮೃತ ಪಟ್ಟ ದೇಹಗಳನ್ನು ಕೂಡ ಈ 12 ವಿದ್ಯುತ್ ಚಿತಾಗಾರಗಳಲ್ಲಿ ಅಂತ್ಯ ಸಂಸ್ಕಾರ ಮಾಡಲು ಆದೇಶಿಸಿದೆ.

| ಕ್ರಮ ಸಂಖ್ಯೆ | ವಲಯ | ಚಿತಾಗಾರದ ಸ್ಥಳ |
|---|---|---|
| 1 | ಆರ್.ಆರ್.ನಗರ | ಕೆಂಗೇರಿ |
| 2 | | ಸುಮ್ಮನಹಳ್ಳಿ |
| 3 | | ಪೀಣ್ಯ |
| 4 | ಯಲಹಂಕ | ಮೇಡಿ ಅಗ್ರಹಾರ |
| 5 | | ಹೆಬ್ಬಾಳ ಕೆಂಪಾಪುರ |
| 6 | ಬೊಮ್ಮನಹಳ್ಳಿ | ಕೂಡ್ಲು |
| 7 | ಮಹದೇವಪುರ | ಪಣತ್ತೂರು |
| 8 | ಪೂರ್ವ | ಕಲ್ಲಹಳ್ಳಿ |
| 9 | ಪಶ್ಚಿಮ | ಹರಿಶ್ಚಂದ್ರ ಘಾಟ್ |
| 10 | | ಮೈಸೂರು ರಸ್ತೆ |
| 11 | ದಕ್ಷಿಣ | ಬನಶಂಕರಿ |
| 12 | | ವಿಲ್ಸನ್ ಗಾರ್ಡನ್ |

**ಕರ್ತವ್ಯಗಳ ವಿವರಗಳು :**

1. ಸದರಿ ವಿದ್ಯುತ್ ಚಿತಾಗಾರಗಳು ಬೆಳಿಗ್ಗೆ 8.00 ರಿಂದ ರಾತ್ರಿ 8.00 ರವರೆಗೆ ಕಾರ್ಯ ನಿರ್ವಹಿಸಲು ಸೂಚಿಸಿದೆ.
2. ಅಧೀಕ್ಷಕ ಅಭಿಯಂತರರು (ವಿದ್ಯುತ್) ಪ್ರತೀ ದಿನ ಬೆಳಿಗ್ಗೆ 11.00 ಗಂಟೆಗೆ ಹಿಂದಿನ ದಿನದ ಕೋವಿಡ್–19 ಸೋಂಕಿತ ಮೃತದೇಹದ ಅಂತ್ಯಕ್ರಿಯೆ ಕೈಗೊಂಡಿರುವ ವರದಿಯನ್ನು ಮುಖ್ಯ ಆರೋಗ್ಯಾಧಿಕಾರಿ (ಸಾ.ಆ.) ರವರಿಗೆ ತಿಳಿಸಿದೆ.
3. ಕೋವಿಡ್–19 ಸೋಂಕಿತ ಶವ ಸಾಗಿಸುವ ವಾಹನ ವೆಚ್ಚ ಮತ್ತು ಅಂತ್ಯಕ್ರಿಯೆಗೆ ತಗುಲುವ ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಸಂಪೂರ್ಣವಾಗಿ ರಿಯಾಯಿತಿ ನೀಡಲಾಗಿದ್ದು, ಸಂಬಂಧಿಕರಿಂದ ಅಥವಾ ಸಾರ್ವಜನಿಕರಿಂದ ಯಾವುದೇ ರೀತಿಯ ಶುಲ್ಕವನ್ನು ಪಡೆಯುವಂತಿಲ್ಲ.
4. ಸಂಬಂಧಪಟ್ಟ ವಲಯ ಆರೋಗ್ಯಾಧಿಕಾರಿಗಳು ಕಾಯ್ದಿರಿಸಲಾಗಿರುವ ವಿದ್ಯುತ್ ಚಿತಾಗಾರ ಸಿಬ್ಬಂದಿಗಳಿಗೆ ಅವಶ್ಯವಿರುವ ಸುರಕ್ಷತಾ ಪರಿಕರಗಳನ್ನು ಒದಗಿಸಲು ಹಾಗೂ ಸ್ಯಾನಿಟೈಸೇಷನ್ ಮಾಡಲು ಈ ಪತ್ರದ ಮೂಲಕ ಆದೇಶಿಸಿದೆ.
5. ಸದರಿ ವಿದ್ಯುತ್ ಚಿತಾಗಾರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ, ದಿನಾಂಕ : 01–04–2021 ರಿಂದ ಮಾಹೆಯಾನ ವೇತನವನ್ನು ಹಾಗೂ ಇತರೆ ಭತ್ಯೆಗಳನ್ನು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರು ನಿರ್ವಹಿಸುವುದು.
6. ಶವ ಸಂಸ್ಕಾರಗಳನ್ನು ಯಾವುದೇ ರೀತಿಯ ವಿಳಂಬವಾಗದಂತೆ ಕಾರ್ಯ ನಿರ್ವಹಿಸುವುದು.

21/4/21

**ಮುಖ್ಯ ಆಯುಕ್ತರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಗಳು :**

1. ಮಾನ್ಯ ಆಡಳಿತಾಧಿಕಾರಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಪಾಲಿಕೆಯ ಎಲ್ಲಾ ವಲಯದ ಜಂಟಿ ಆಯುಕ್ತರುಗಳ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
6. ಮುಖ್ಯ ಆರೋಗ್ಯಾಧಿಕಾರಿ (ಸಾ.ಆ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7. ಪಾಲಿಕೆಯ ಎಲ್ಲಾ ವಲಯದ ಆರೋಗ್ಯಾಧಿಕಾರಿ / ಉಪ ಆರೋಗ್ಯಾಧಿಕಾರಿ / ಆರೋಗ್ಯ ವೈದ್ಯಾಧಿಕಾರಿ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8. ಅಧೀಕ್ಷಕ ಅಭಿಯಂತರರು (ವಿದ್ಯುತ್) / ಪಾಲಿಕೆಯ ಎಲ್ಲಾ ವಲಯದ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.